ತೆರಿಗೆ ಸಂಗ್ರಹಣೆಯಲ್ಲಿ ಆಗಿರತಕ್ಕ ಏರುಪೇರುಗಳಿಗೆ ಕಾರಣಗಳು ಈ ಕೆಳಗಿನಂತಿವೆ :

ಅ) ತೆರಿಗೆ ಸುಧಾರಣಾ ಕ್ರಮವಾಗಿ ಸರ್‌ಚಾರ್ಜ್‌ನ್ನು ರದ್ದು ಮಾಡಿರುವುದು.

ಆ) ಅನೇಕ ಸರಕುಗಳಿಗೆ ತೆರಿಗೆ ವಿನಾಯಿತಿ ನೀಡಿರುವುದು.

ಇ) ಹೊಸ ಕೈಗಾರಿಕೆಗಳಿಗೆ ತೆರಿಗೆ ಮುಂದೂಡಿಕೆ ಸೌಲಭ್ಯ ನೀಡಿರುವುದು.

ಈ) ಮಾರುಕಟ್ಟೆಯಲ್ಲಿ ವಹಿವಾಟು ಕಡಿಮೆಯಾಗಿರುವುದು.

ಅ) (ರೂ.ಕೋಟಿಗಳಲ್ಲಿ)

ಕ್ರ. ಸಂ.	ಅಧಿನಿಯಮ	1997-98ರ ವಾರ್ಷಿಕ ಗುರಿ	31.1.98ರ ವರೆಗಿನ ಸಂಗ್ರಹಣೆ
1.	ಮಾರಾಟ ತೆರಿಗೆ	4373.00	3045.29
2.	ಮನರಂಜನಾ ತೆರಿಗೆ	32.00	39.44
3.	ಕೃಷಿ ವರಮಾನ ತೆರಿಗೆ	43.00	27.41
4.	ವೃತ್ತಿ ತೆರಿಗೆ	140.00	84.42
5.	ಪ್ರವೇಶ ತೆರಿಗೆ	213.00	194.23
6.	ವೈಭವ ತೆರಿಗೆ	38.00	39.35
7.	ಜೂಜು ತೆರಿಗೆ	16.00	10.27
	ಒಟ್ಟು	**4855.00**	**3440.41**

ಅಭಿವೃದ್ಧಿ ಯೋಜನೆಗಾಗಿ ನಿಗದಿಪಡಿಸಿದ ಹಣ

853 -ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಹಣಕಾಸು ಯೋಜನೆ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ಅಭಿವೃದ್ಧಿ ವೆಚ್ಚಕ್ಕೆ ತೆಗೆದಿಡಲಾದ ಹಣ ಎಷ್ಟು ?

ಆ) 1997-98ನೇ ಸಾಲಿಗೆ ನಿಗದಿಪಡಿಸಿದ್ದ ಯೋಜನಾ ಮೊತ್ತವೆಷ್ಟು ?

ಇ) 1998ನೇ ಮಾರ್ಚ್ 31ರ ಕೊನೆಯವರೆಗೆ ಖರ್ಚಾದ ಹಣ ಎಷ್ಟು ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಯೋಜನೆ ಮತ್ತು ಕಾರ್ಮಿಕ ಸಚಿವರು) :

ಅ) ಅಭಿವೃದ್ಧಿ ವೆಚ್ಚಕ್ಕಾಗಿ ತೆಗೆದಿಡಲಾದ ಹಣದ ವಿವರ ಕೆಳಕಂಡಂತಿದೆ.

(ಕೋಟಿ ರೂಪಾಯಿಗಳಲ್ಲಿ)

ವರ್ಷ	ಮೊಬಲಗು (ಆಯವ್ಯಯ)
1995-96	7656.20
1996-97	8537.55
1997-98	9001.92

ಆ) 1997-98ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿದ್ದ ರಾಜ್ಯ ಯೋಜನಾ ಮೊತ್ತ 4545 ಕೋಟಿ ರೂಪಾಯಿಗಳು.

ಇ) ಪರಿಷ್ಕೃತ ಅಂದಾಜಿನ ಪ್ರಕಾರ 1997-98ನೇ ಸಾಲಿನಲ್ಲಿ ರಾಜ್ಯ ಯೋಜನೆಯ ಅಂದಾಜು ವೆಚ್ಚ 4326 ಕೋಟಿ ರೂಪಾಯಿಗಳು.

ಉಪಾಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು. ಈಗ ಸದನವು ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 7 ಗಂಟೆ 17 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 21ನೇ ಏಪ್ರಿಲ್ ಮಾಹೆ 1998ರ ಮಂಗಳವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಶಾಮು. ತುಮಕೂರು, ಕಾಸೂ. 116 - 350 ಪುಸ್ತಕಗಳು ದಿ: 25-07-2002.